# ಗಣರಾಜ್ಯೋತ್ಸವ ಸಮಾರಂಭ

**ಚಿತ್ರದುರ್ಗ**-26 : ಗಣರಾಜ್ಯೋತ್ಸವ ಇದೊಂದು ಅತ್ಯಾಕರ್ಷಕವಾಗಿರುವ ಸಂದರ್ಭ. ರಾಷ್ಟ್ರೀಯ ಹಬ್ಬ. ಇಲ್ಲಿ ಶಿಸ್ತು ಸಂಯಮ ಮುಖ್ಯ. ಇದು ಇಂದಿಗೆ ಮಾತ್ರ ಸೀಮಿತವಾಗಬಾರದು. ಇದನ್ನು ಮುಂದುವರೆಸಿಕೊಂಡು ಹೋದವರು ರಾಷ್ಟ್ರದ ಸತ್ಪ್ರಜೆಗಳಾಗುತ್ತಾರೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀಮಠದ ಅನುಭವ ಮಂಟಪದ ಮುಂಭಾಗದಲ್ಲಿ ನಡೆದ 72ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಶ್ರೀಗಳು, ಮಾನವ ಬದುಕನ್ನು ಆಗಾಗ ನಿರಾಸಕ್ತಿಯು ಸತಾಯಿಸುತ್ತದೆ. ಯಾವ ಲವಲವಿಕೆಯು ಕಂಡು ಬರುವುದಿಲ್ಲ. ಕಾರಣ ಅದರಿಂದ ಬಿಡಿಸಿಕೊಳ್ಳಬೇಕಾಗುತ್ತದೆ. ಏನನ್ನು ಕಳೆದುಕೊಂಡರೂ ಉತ್ಸಾಹವನ್ನು ಕಳೆದುಕೊಳ್ಳಬಾರದು. ಹಾಗೆಯೇ ಸಮಾಜದಲ್ಲಿ ನಾವು ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಬಸವಣ್ಣ ಮತ್ತು ಇತರ ಶರಣರು ಸಮಾಜದಲ್ಲಿ ಅಸಮಾನತೆ ವಿರುದ್ಧ ಹೋರಾಡಿದರು. ಅಸ್ಪೃಶ್ಯತೆಯನ್ನು ನಿವಾರಿಸುವಲು ಪ್ರಯತ್ನಿಸಿದರು. ಅವರ ತತ್ತ್ವ ಸಿದ್ಧಾಂತಗಳು ನಮಗೆ ಬಹಳ ಮುಖ್ಯ. ನಾವು ಸಮಾಜಕ್ಕೆ ಸದಾ ಸೇವಕರಾಗಿರಬೇಕು. ಅಧಿಕಾರದ ದರ್ಪ ಇರಬಾರದು. ಸ್ವಾರ್ಥದ ಬದುಕಿಗೆ ಕಡಿವಾಣ ಹಾಕಿ ನಿಸ್ವಾರ್ಥದ ಜೊತೆ ಸಾಗುತ್ತ ಸಮಾಜದಲ್ಲಿ ಎಲ್ಲರೂ ಸಂತೃಪ್ತ ವ್ಯಕ್ತಿಗಳಾಗಬೇಕು. `ಸ್ವಾರ್ಥದ ಜಪ ಸಾಕು; ಸೇವೆಯ ಜಪ ಬೇಕು' ಎಂದು ತಿಳಿಸಿದರು.

ವ್ಯವಸ್ಥೆ ನಡೆಸುವುದು ಒಂದು ಸವಾಲು. ಕೋವಿಡ್ ಕಾಲದಲ್ಲು ನೌಕರರಿಗೆ ವೇತನ ನೀಡಲಾಗಿದೆ. ದುಡಿಯುವ ನೌಕರರಿಗೆ ಅನ್ಯಾಯ ಮಾಡಿಲ್ಲ. ಬಸವಣ್ಣ ಮತ್ತಿತರ ದಾರ್ಶನಿಕರು ನಮಗೆ ಹೇಳಿಕೊಟ್ಟಿರುವ ಪಾಠವಿದು. 14ವರ್ಷಗಳಿಂದ ಅನೇಕ ರೀತಿಯ ಅಭಿವೃದ್ಧಿಕಾರ್ಯಗಳನ್ನು ನೆರವೇರಿಸಲಾಗಿದೆ. ರಾಜ್ಯಾದ್ಯಂತ ಬೇರೆಬೇರೆ ಸ್ಥಳಗಳಲ್ಲಿರುವ ಸಂಸ್ಥೆಗಳನ್ನು ಬೆಳೆಸಲಾಗಿದ್ದು, ಶ್ರೀಮಠವಿಂದು ಸಬಲವಾಗಿದೆ. ಗುಣಮಟ್ಟದ ಶಿಕ್ಷಣಕ್ಕೆ ಒತ್ತು ಕೊಡಲಾಗಿದೆ. ಅನುಭವ ಮಂಟಪದ ಮುಂದೆ ಧ್ವಜಾರೋಹಣ ನೆರವೇರಿಸಲಾಗಿದೆ. ಅನುಭವ ಮಂಟಪ ಶ್ರೀಮಠದ ಹೆಮ್ಮೆಯ ಮಂಟಪವಾಗಿದೆ ಎಂದರು.

ವೇದಿಕೆಯಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ ಹಾಗು ಶಾಲಾ ಕಾಲೇಜುಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಎಸ್.ಜೆ.ಎಂ. ವಿದ್ಯಾಪೀಠದ ವಿವಿಧ ಶಾಲಾಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸಿ ಸೇವಾನಿವೃತ್ತರಾದವರಿಗೆ, ರ್ಯಾಂಕ್ ವಿಜೇತ ವಿದ್ಯಾರ್ಥಿಗಳಿಗೆ, ಕ್ರೀಡಾ ಸಾಧಕರಿಗೆ ಹಾಗು ಪಿಹೆಚ್.ಡಿ. ಪದವೀಧರರಿಗೆ ಸನ್ಮಾನಿಸಲಾಯಿತು. ನೇತ್ರಾವತಿ ಮತ್ತು ನಾಗರಾಜ್ ಬಿ. ನಿರೂಪಿಸಿದರು.












ಅನುಭವ ಮಂಟಪ


ಅನುಭವ ಮಂಟಪ